**All India Radio: Bangalore**
**National Bulletin In Kannada**
**28.06.2025 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**28.06.2025 1.10 p.m.**

**<><><><>**

ಮುಖ್ಯಾಂಶಗಳು

1. ನವದೆಹಲಿಯಲ್ಲಿ ಆಚಾರ್ಯ ವಿದ್ಯಾನಂದಜಿ ಮಹಾರಾಜ್ ಶತಮಾನೋತ್ಸವದಲ್ಲಿ ಪ್ರಧಾನಿ ಭಾಗಿ; ವಿಶೇಷ ನಾಣ್ಯ, ಅಂಚೆ ಚೀಟಿ ಬಿಡುಗಡೆ
2. ಮನ್ ಕಿ ಬಾತ್‌ನ ೧೨೩ನೇ ಸಂಚಿಕೆಯಲ್ಲಿ ನಾಳೆ ಪ್ರಧಾನಿ ನರೇಂದ್ರ ಮೋದಿ ಮನದಾಳದ ಮಾತು
3. ಕೃಷಿ ಉದ್ದೇಶದ ನೀರಿನ ಬಳಕೆಯ ಮೇಲೆ ತೆರಿಗೆ ವಿಧಿಸುವ ಯಾವುದೇ ಯೋಜನೆಯಿಲ್ಲ - ಕೇಂದ್ರ ಸರ್ಕಾರ ಸ್ಪಷ್ಟನೆ
4. ಯುಎಸ್ ಓಪನ್ ಬ್ಯಾಡ್ಮಿಂಟನ್: ವೈಯಕ್ತಿಕ ವಿಭಾಗಗಳಲ್ಲಿ ಸೆಮಿಫೈನಲ್ ಪ್ರವೇಶಿಸಿದ ಭಾರತದ ಆಯುಷ್ ಶೆಟ್ಟಿ, ತಾನ್ವಿ ಶರ್ಮಾ

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ನವದೆಹಲಿಯಲ್ಲಿ ಜೈನ ಧಾರ್ಮಿಕ ಮುಖಂಡ ಹಾಗೂ ಸಾಮಾಜಿಕ ಸುಧಾರಕ ಆಚಾರ್ಯ ವಿದ್ಯಾನಂದಜಿ ಮಹಾರಾಜ್ ಅವರ ಶತಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ವೇಳೆ ಅವರು, ಆಚಾರ್ಯ ವಿದ್ಯಾನಂದಜಿ ಅವರ ಸ್ಮರಣಾರ್ಥ ನಾಣ್ಯ ಮತ್ತು ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿದರು. ಬಳಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಒಬ್ಬ ಯುಗ ಪುರುಷರಾಗಿದ್ದ ಆಚಾರ್ಯ ವಿದ್ಯಾನಂದಜಿ ಮಹಾರಾಜ್ ಲಕ್ಷಾಂತರ ಯುವಕರನ್ನು ಸಂಯಮ, ಸಂಸ್ಕೃತಿ ಮತ್ತು ಭಾರತೀಯ ಸಂಪ್ರದಾಯಗಳೊಂದಿಗೆ ಸಂಪರ್ಕಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅವರ ವಾಣಿಯಲ್ಲಿ ಆಳವಾದ ಜ್ಞಾನ ಅಡಗಿತ್ತು. ಅವರ ಭಾಷೆ ಸಾಮಾನ್ಯ ಜನರಿಗೂ ಅರ್ಥವಾಗುವಷ್ಟು ಸರಳವಾಗಿತ್ತು. ೧೫೦ಕ್ಕೂ ಅಧಿಕ ಗ್ರಂಥಗಳನ್ನು ಬರೆದಿರುವ ಅವರು, ದೇಶಾದ್ಯಂತ ಸಾವಿರ ಕಿಲೋಮೀಟರ್‌ಗೂ ಹೆಚ್ಚು ಪರ್ಯಟನೆ ಮಾಡಿದ್ದಾರೆ ಎಂದರು. ನಮ್ಮ ವಿಚಾರಗಳು ಹಾಗೂ ಚಿಂತನೆ ಅಮರವಾಗಿರುವುದರಿಂದ ಭಾರತ ವಿಶ್ವದ ಅತಿ

ಪ್ರಾಚೀನ ಮತ್ತು ಜೀವಂತ ನಾಗರಿಕತೆಯಾಗಿದೆ. ಈ ಎಲ್ಲಾ ವಿಚಾರ ಹಾಗೂ ಚಿಂತನೆಗಳ ಮೂಲ ನಮ್ಮ ಋಷಿ ಮುನಿಗಳಾಗಿದ್ದಾರೆ. ಆಚಾರ್ಯ ವಿದ್ಯಾನಂದಜಿ ಮಹಾರಾಜ್ ಅವರೂ ಕೂಡ ಇದೇ ಋಷಿ ಮುನಿಗಳ ಪರಂಪರೆಯವರಾಗಿದ್ದರೂ ಆಧುನಿಕ ವಿಷಯಗಳ ಕುರಿತು ಅವರು ಅಗಾಧ ಜ್ಞಾನ ಹೊಂದಿದ್ದರು.

**** ಧ್ವನಿ **** ಪ್ರಧಾನಿ

ಆಚಾರ್ಯ ವಿದ್ಯಾನಂದಜಿ ಮಹಾರಾಜ್ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಕೇಂದ್ರ ಸರ್ಕಾರ ಮತ್ತು ಭಗವಾನ್ ಮಹಾವೀರ ಅಹಿಂಸಾ ಭಾರತೀ ಟ್ರಸ್ಟ್ ಸಹಯೋಗದಲ್ಲಿ ಯೋಜಿಸಿರುವ ದೇಶವ್ಯಾಪಿ ಒಂದು ವರ್ಷದ ಆಚರಣೆಗೆ ಈ ಕಾರ್ಯಕ್ರಮದ ಮೂಲಕ ಚಾಲನೆ ದೊರೆತಿದೆ. ಈ ಶತಮಾನೋತ್ಸವದ ಅಂಗವಾಗಿ ದೇಶದಾದ್ಯಂತ ಸಾಂಸ್ಕೃತಿಕ, ಸಾಹಿತ್ಯ, ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ಆಚಾರ್ಯ ವಿದ್ಯಾನಂದಜಿ ಮಹಾರಾಜ್ ಬದುಕು, ದಾರ್ಶನಿಕತೆ ಮತ್ತು ಸಂದೇಶವನ್ನು ಸಾರುವ ಉದ್ದೇಶ ಹೊಂದಿದೆ.

<><><><>

ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಅವರ ಜನ್ಮ ವರ್ಷಾಚರಣೆಯ ಅಂಗವಾಗಿ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಗೌರವ ನಮನ ಸಲ್ಲಿಸಿದ್ದಾರೆ. ಭಾರತದ ಅಭಿವೃದ್ಧಿಯ ಹಾದಿಯನ್ನು ರೂಪಿಸುವಲ್ಲಿ ನರಸಿಂಹರಾವ್ ಅವರ ಅತ್ಯಮೂಲ್ಯ ಪಾತ್ರವನ್ನು ಸ್ಮರಿಸಿರುವ ಅವರು, ಅವರ ಕೊಡುಗೆಗಳಿಗೆ ದೇಶ ಕೃತಜ್ಞವಾಗಿದೆ. ಅವರ ಜ್ಞಾನ, ವಿಚಾರ ಚಿಂತನೆಗಳು ಮತ್ತು ಪಾಂಡಿತ್ಯಪೂರ್ಣ ಸ್ವಭಾವ, ಜಗತ್ತಿನೆಲ್ಲೆಡೆ ಮೆಚ್ಚುಗೆಗೆ ಪಾತ್ರವಾಗಿದ್ದವು ಎಂದು ಪ್ರಧಾನಿ ಸ್ಮರಿಸಿದ್ದಾರೆ.

<><><><>

ಆಕಾಶವಾಣಿಯ ಜನಪ್ರಿಯ ಮಾಸಿಕ ಕಾರ್ಯಕ್ರಮ ಮನ್ ಕಿ ಬಾತ್‌ನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಳೆ ಬೆಳಗ್ಗೆ ೧೧ ಗಂಟೆಗೆ ದೇಶ-ವಿದೇಶಗಳಲ್ಲಿರುವ ಭಾರತೀಯ ಸಮುದಾಯದೊಂದಿಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ಕಾರ್ಯಕ್ರಮದ ೧೨೩ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮ ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎಐಆರ್ ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್

ಆಪ್‌ನಲ್ಲಿ ಪ್ರಸಾರವಾಗಲಿದೆ. ಹಿಂದಿ ಅವತರಣಿಕೆಯ ನಂತರ ಪ್ರಾದೇಶಿಕ ಭಾಷೆಗಳಲ್ಲಿ ನೀವು ಈ ಕಾರ್ಯಕ್ರಮವನ್ನು ಕೇಳಬಹುದು.

<><><>

ಕೃಷಿ ಉದ್ದೇಶಗಳಿಗೆ ನೀರಿನ ಬಳಕೆಯ ಮೇಲೆ ತೆರಿಗೆ ವಿಧಿಸುವ ಯಾವುದೇ ಯೋಜನೆಯಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಕಮಾಂಡ್ ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣೆಯ ಆಧುನೀಕರಣ ಯೋಜನೆ"-ಎಂ-ಸಿಎಡಿಡಬ್ಲ್ಯೂಎಂ ಅಡಿಯಲ್ಲಿ ತೆರಿಗೆ ವಿಧಿಸುವುದಾಗಿ ಕೆಲವು ಮಾಧ್ಯಮಗಳಲ್ಲಿ ಬಂದ ವರದಿಗಳನ್ನು ಜಲಶಕ್ತಿ ಸಚಿವಾಲಯ ಆಧಾರರಹಿತವೆಂದು ಖಂಡಿಸಿದೆ. ಈ ಯೋಜನೆಯಡಿ ರೈತರ ಮೇಲೆ ನೀರಿಗಾಗಿ ಬಳಕೆ ಶುಲ್ಕ ವಿಧಿಸುವಂತೆ ಯಾವುದೇ ನಿಬಂಧನೆ ಅಥವಾ ಸರ್ಕಾರದ ನಿರ್ದೇಶನವಿಲ್ಲ ಎಂಬುದಾಗಿ ಸಚಿವಾಲಯ ಸ್ಪಷ್ಟಪಡಿಸಿದೆ. ಇದಲ್ಲದೇ, ಕೃಷಿ ಮತ್ತು ನೀರಿನ ವಿಷಯಗಳು ರಾಜ್ಯಗಳ ಆಡಳಿತಾಧಿಕಾರದ ವ್ಯಾಪ್ತಿಗೆ ಬರುವುದರಿಂದ, ಯಾವುದೇ ಶುಲ್ಕ ಸಂಗ್ರಹಣೆ ಸಂಬಂಧಿತ ನಿರ್ಧಾರ ರಾಜ್ಯ ಸರ್ಕಾರಗಳ ಆದೀನದಲ್ಲಿದೆ ಎಂದು ಸ್ಪಷ್ಠಪಡಿಸಲಾಗಿದೆ. ಇದಕ್ಕೂ ಮುನ್ನ, ಕೆಲ ಮಾಧ್ಯಮಗಳಲ್ಲಿ ಕೇಂದ್ರ ಸರ್ಕಾರದ ಈ ಯೋಜನೆಯಡಿ ರೈತರು ನೀರಿಗಾಗಿ ತೆರಿಗೆ ಪಾವತಿಸಬೇಕಾಗುತ್ತದೆ ಎಂಬ ಆಧಾರರಹಿತ ವರದಿಗಳು ಪ್ರಕಟವಾಗಿದ್ದವು. ಈ ಬಗ್ಗೆ ಪ್ರತಿಕ್ರಿಯಿಸಿರುವ ಜಲ್ ಶಕ್ತಿ ಸಚಿವಾಲಯ, ಮಾಧ್ಯಮ ಸೇರಿದಂತೆ ಎಲ್ಲಾ ಪಾಲುದಾರರು ನಿಖರ ಮಾಹಿತಿಯನ್ನು ಪರಿಶೀಲಿಸಿ ವರದಿ ನೀಡುವಂತೆ ಮನವಿ ಮಾಡಿದೆ. ತಪ್ಪು ಮಾಹಿತಿ ರೈತ ಸಮುದಾಯದಲ್ಲಿ ಅನಗತ್ಯ ಆತಂಕ ಅಥವಾ ಗೊಂದಲ ಉಂಟುಮಾಡುವ ಸಾಧ್ಯತೆಯಿದೆ ಎಂದು ಸಚಿವಾಲಯ ಎಚ್ಚರಿಸಿದೆ.

<><><>

ಇರಾನ್ ರಾಜಧಾನಿ ಟೆಹ್ರಾನ್‌ನ ಆಜಾದಿ ರಸ್ತೆಯಲ್ಲಿ ಇಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಐಆರ್‌ಜಿಸಿ ಕಮಾಂಡರ್‌ಗಳು, ಯೋಧರು, ಪರಮಾಣು ವಿಜ್ಞಾನಿಗಳು ಮತ್ತು ನಾಗರಿಕರಿಗೆ ಗೌರವಪೂರ್ಣ ಅಂತ್ಯಕ್ರಿಯೆ ನೆರವೇರಿತು. ಇಸ್ರೇಲ್‌ನೊಂದಿಗೆ ನಡೆದ ೧೨ ದಿನಗಳ ಯುದ್ಧದಲ್ಲಿ ಪ್ರಾಣ ಕಳೆದುಕೊಂಡ ೬೦ ಮಂದಿ ಇರಾನಿಯನ್ನರ ಅಂತ್ಯಕ್ರಿಯೆಯಲ್ಲಿ ಸಾವಿರಾರು ಜನರು ಭಾಗವಹಿಸಿದರು. ಇಸ್ರೇಲ್ ದಾಳಿಯಲ್ಲಿ ಐಆರ್‌ಜಿಸಿ ಮುಖ್ಯಸ್ಥ ಹೊಸೇನ್ ಸಲಾಮಿ, ಏರೋಸ್ಪೇಸ್ ಪಡೆ ಕಮಾಂಡರ್, ಒಬ್ಬ ಉನ್ನತಾಧಿಕಾರಿ ಸೇರಿದಂತೆ ಹಲವರು ಮೃತಪಟ್ಟಿದ್ದರು.

<><><>

ಅಮೆರಿಕದ ಅಯೋವಾದ ಕೌನ್ಸಿಲ್ ಬ್ಲಫ್ಸ್‌ನಲ್ಲಿ ನಡೆಯುತ್ತಿರುವ ಯುಎಸ್ ಓಪನ್ ೨೦೨೫ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಯುವ ಶಟ್ಲರ್‌ಗಳಾದ ಆಯುಷ್ ಶೆಟ್ಟಿ ಮತ್ತು ತಾನ್ವಿ ಶರ್ಮಾ ತಮ್ಮ ತಮ್ಮ ವಿಭಾಗದ ಸೆಮಿಫೈನಲ್ ಹಂತಕ್ಕೇರಿದ್ದಾರೆ. ಇಂದು ಬೆಳಗ್ಗೆ ನಡೆದ ಮಹಿಳಾ ವೈಯಕ್ತಿಕ ವಿಭಾಗದ ಪಂದ್ಯದಲ್ಲಿ ತಾನ್ವಿ ಮಲೇಷಿಯಾದ ಲೆಷಾನ ಕರೂಪತೇವನ್ ಅವರನ್ನು ೨೧-೧೩, ೨೧-೧೬ ನೇರ ಸೆಟ್‌ಗಳಿಂದ ಮಣಿಸಿದರು. ಪುರುಷರ ಸಿಂಗಲ್ಸ್‌ನಲ್ಲಿ ಆಯುಷ್ ಶೆಟ್ಟಿ ಚೀನಾ ತೈಪೆಯ ಕುವೊ-ಕುವಾನ್ ಲಿನ್ ವಿರುದ್ಧ ೨೨-೨೦, ೨೧-೯ ಅಂತರದಲ್ಲಿ ಮಣಿಸಿ, ಸೆಮಿಫೈನಲ್ ಪ್ರವೇಶಿಸಿದರು.  ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತದ ಹರಿಹರನ್ ಅಂಸಕರುಣನ್ ಮತ್ತು ರುಬನ್ ಕುಮಾರ್ ಜೋಡಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸೋಲನುಭವಿಸಿದೆ. ಸೆಮಿಫೈನಲ್ ಪಂದ್ಯಗಳಲ್ಲಿ ತಾನ್ವಿ ಶರ್ಮಾ, ಉಕ್ರೇನ್‌ನ ಪೋಲಿನಾ ಬುಹ್ರೋವಾ ಅವರನ್ನು ಎದುರಿಸಲಿದ್ದರೆ, ಆಯುಷ್ ಶೆಟ್ಟಿ  ಚೀನಾದ ಚೌಟ್ಯಾನ್ ಚೆನ್ ಅವರನ್ನು ಎದುರಿಸಲಿದ್ದಾರೆ.

<><><>

ನಾಟಿಂಗ್‌ಹ್ಯಾಮ್‌ನ ಟ್ರೆಂಟ್ ಬ್ರಿಡ್ಜ್‌ನಲ್ಲಿಂದು ಭಾರತ ಹಾಗೂ ಇಂಗ್ಲೆಂಡ್ ವನಿತೆಯ ತಂಡಗಳ ನಡುವಿನ ಐದು ಪಂದ್ಯಗಳ ಟಿ-೨೦ ಅಂತಾರಾಷ್ಟ್ರೀಯ ಕ್ರಿಕೆಟ್ ಸರಣಿಗೆ ಚಾಲನೆ ದೊರೆಯಲಿದೆ. ಇಂದು ನಡೆಯಲಿರುವ ಮೊದಲ ಪಂದ್ಯ ಭಾರತೀಯ ಕಾಲಮಾನ ಸಂಜೆ ೭ ಗಂಟೆಗೆ ಆರಂಭವಾಗಲಿದೆ. ೨೦ ಓವರ್ ಮಾದರಿಯ ಪಂದ್ಯದಲ್ಲಿ ಉಭಯ ತಂಡಗಳು ಡಿಸೆಂಬರ್ ೨೦೨೩ರ ಬಳಿಕ ಮೊದಲ ಬಾರಿಗೆ ಮುಖಾಮುಖಿಯಾಗುತ್ತಿವೆ. ಉಭಯ ತಂಡಗಳು ತಮ್ಮ ಇತ್ತೀಚಿನ ಪಂದ್ಯಗಳಲ್ಲಿ ಪ್ರಬಲ ಪ್ರದರ್ಶನಗಳೊಂದಿಗೆ ಗೆಲುವು ಸಾಧಿಸಿ, ಹೆಚ್ಚಿನ ವಿಶ್ವಾಸ ಹಾಗೂ ಹುಮ್ಮಸ್ಸಿನೊಂದಿಗೆ ಕಣಕ್ಕಿಳಿಯುತ್ತಿವೆ. ಈ ಸರಣಿ ಲಂಡನ್‌ನಲ್ಲಿ ೨೦೨೬ರ ಜೂನ್‌ನಲ್ಲಿ ಆರಂಭವಾಗಲಿರುವ ಮಹಿಳಾ ವಿಶ್ವಕಪ್‌ಗೆ ಪೂರ್ವಭಾವಿ ಅಭ್ಯಾಸವೆಂದು ಪರಿಗಣಿಸಲಾಗಿದೆ.

<><><>

ಅಖಿಲ ಭಾರತ ಫುಟ್ಬಾಲ್ ಒಕ್ಕೂಟ ಆಗಸ್ಟ್ ೧೪ರಂದು ನವದೆಹಲಿಯ ಫುಟ್ಬಾಲ್ ಹೌಸ್‌ನಲ್ಲಿ ಉನ್ನತ ಪ್ರಭಾವ ಕಾರ್ಯಕ್ಷಮತೆ ವಿಶ್ಲೇಷಣಾ ಕಾರ್ಯಾಗಾರವನ್ನು ಆಯೋಜಿಸಲಿದೆ. ಫುಟ್ಬಾಲ್ ತರಬೇತುದಾರರದಲ್ಲಿ ತಂತ್ರಾತ್ಮಕ ಮತ್ತು ವಿಶ್ಲೇಷಣಾತ್ಮಕ ಕೌಶಲ್ಯಗಳನ್ನು ವೃದ್ಧಿಸುವ ಉದ್ದೇಶವನ್ನು ಈ ಕಾರ್ಯಾಗಾರ ಹೊಂದಿದೆ. ವಿಶೇಷ ತಜ್ಞರು ಕಾರ್ಯಾಗಾರವನ್ನು ನಡೆಸಿಕೊಡಲಿದ್ದು, ರಾಷ್ಟ್ರೀಯ ಹಾಗು ಅಂತಾರಾಷ್ಟ್ರೀಯ ತಂಡಗಳು ಬಳಸುವ ವಿಡಿಯೋ

ವಿಶ್ಲೇಷಣಾ ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಬಳಸುವ ಕುರಿತಾಗಿ ತರಬೇತಿಯನ್ನು ನೀಡಲಿದ್ದಾರೆ. ಆಸಕ್ತರು ಎಐಎಫ್ಎಫ್ ಜಾಲತಾಣದಲ್ಲಿ ಲಭ್ಯವಿರುವ ನೋಂದಣಿ ಲಿಂಕ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಜುಲೈ ೭ ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>